KAKD030025962021

ಅಪರ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ
ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಮಡಿಕೇರಿ

ಉಪಸ್ಥಿತಿಃ ಶ್ರೀ ನಾಗೇಶ್ ಎನ್.ಎ., ಬಿ.ಎ., ಎಲ್.ಎಲ್.ಬಿ.,
ಅಪರ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ
ನ್ಯಾಯಿಕ ದಂಡಾಧಿಕಾರಿಗಳು, ಮಡಿಕೇರಿ.

ದಿನಾಂಕ ಇದೇ **2** ನೇ **ಆಗಸ್ಟ್** ಮಾಹೆಯಾನ **2024**

ಸಿ.ಸಿ.ನಂ.11/2022

ಪಿರ್ಯಾದುದಾರರು : ಕರ್ನಾಟಕ ಸರ್ಕಾರ
ಸುಂಟಿಕೊಪ್ಪ ಅರಕ್ಷಕ ಠಾಣೆ
(ಸ. ಸ. ಅಭಿಯೋಜಕರು)

-ವಿರುದ್ಧ-

ಆರೋಪಿ/ಗಳುಃ : 1. ಉಣ್ಣಿಕೃಷ್ಣ,
2. ಶರತ್,
3. ಬಾಲ
ಎಲ್ಲರೂ ವಾಸಃ ಕಾನ್ ಬೈಲ್ ಮಂಜಿಕೆರೆ ಗ್ರಾಮ,
ಸುಂಟಿಕೊಪ್ಪ.

(ಶ್ರೀ ಡಿ.ಡಿ.ಸಿ., ವಕೀಲರು)

1. ಅಪರಾಧ ಪ್ರಾರಂಭವಾದ ದಿನಾಂಕ	:	10.09.2021
2. ಸಾಕ್ಷಿಗಳ ವಿಚಾರಣೆ ಪ್ರಾರಂಭವಾದ ದಿನಾಂಕ	:	25.07.2024
3. ಸಾಕ್ಷಿಗಳ ವಿಚಾರಣೆ ಮುಕ್ತಾಯವಾದ ದಿನಾಂಕ	:	25.07.2024
4. ನ್ಯಾಯಾಧೀಶರ ಅಭಿಪ್ರಾಯ	:	ಅಂತಿಮ ಆದೇಶದಂತೆ

ಸಹಿ/-
(ನಾಗೇಶ್ ಎನ್.ಎ.)
ಅಪರ ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಗಳು, ಮಡಿಕೇರಿ.

ತೀರ್ಪು

ಸುಂಟಿಕೊಪ್ಪ ಆರಕ್ಷಕ ಉಪನಿರೀಕ್ಷಕರು ಆರೋಪಿತರ ವಿರುದ್ಧ ಭಾ.ದಂ.ಸಂ.ಕಲಂ. 323 ಮತ್ತು 325 ಸಹವಾಚಕ ಕಲಂ 34 ರಡಿಯಲ್ಲಿನ ಆಪಾದನೆಗಳಿಗಾಗಿ ಈ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ.

2. **ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೆಃ**-

ದಿಃ 10.09.2021 ರಂದು ರಾತ್ರಿ 7.30 ರ ಸಮಯಕ್ಕೆ ಸುಂಟಿಕೊಪ್ಪ ಠಾಣಾ ಸರಹದ್ದಿನ ಕಾನ್ ಬೈಲ್ ಮಂಜಿಕೆರೆ ಗ್ರಾಮದಲ್ಲಿ ಚಾಸಾ-1 ರವರು ಗಣಪತಿ ವಿಸರ್ಜಿಸಿ ತಮ್ಮ ಊರಿನ ಸಮುದಾಯ ಭವನದ ಬಳಿ ನಿಂತಿದ್ದಾಗ ಆರೋಪಿತರು ಅಲ್ಲಿಗೆ ಬಂದು ಚಾಸಾ-1 ರವರ ಜೊತೆ ವಿನಾ ಕಾರಣ ಜಗಳ ತೆಗೆದಿದ್ದು, ಆರೋಪಿತರ ಪೈಕಿ 2 ಮತ್ತು 3 ನೇ ಆರೋಪಿತರು ಕೈಯಿಂದ ಚಾಸಾ-1 ರವರ ತುಟಿ ಮತ್ತು ಕುತ್ತಿಗೆಯ ಭಾಗಕ್ಕೆ ಹೊಡೆದು ಹಲ್ಲೆ ಮಾಡಿರುತ್ತಾರೆ. 1 ನೇ ಆರೋಪಿತ ಅಲ್ಲಿಯೇ ಬಿದ್ದಿದ್ದ ಒಂದು ದೊಣ್ಣೆಯಿಂದ ಚಾಸಾ-1 ರವರ ಬೆನ್ನು ಮತ್ತು ತೊಡೆಗೆ ಹೊಡೆದು ಹಲ್ಲೆ ಮಾಡಿರುತ್ತಾನೆ. ಆದುದರಿಂದ ಚಾಸಾ-1 ರವರು ಆರೋಪಿತರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ದೂರನ್ನು ಸಲ್ಲಿಸಿರುತ್ತಾರೆ.

3. ಈ ನ್ಯಾಯಾಲಯ ದೋಷಾರೋಪಣ ಪತ್ರವನ್ನು ಪರಿಶೀಲಿಸಿ ಆರೋಪಿತರ ವಿರುದ್ಧ ಸಂಜ್ಞೆ ತೆಗೆದುಕೊಂಡು ಈ

ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ಸಮನ್ಸ್ ಜಾರಿಯಾದ ನಂತರ ಆರೋಪಿತರು ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾನೆ. ನಂತರ ಆರೋಪಿತರ ವಿರುದ್ಧ ದೋಷಾರೋಪಣೆಯನ್ನು ತಯಾರಿಸಿ, ಓದಿ, ತಿಳಿಸಿ, ಕೇಳಿ ಆರೋಪಿತರು ಆರೋಪವನ್ನು ನಿರಾಕರಿಸಿದ್ದು ತಪ್ಪನ್ನು ಒಪ್ಪಿಕೊಂಡಿರುವುದಿಲ್ಲ ಮತ್ತು ಪ್ರಕರಣದ ವಿಚಾರಣೆ ಆಗಲಿ ಎಂದು ಕೋರಿರುತ್ತಾರೆ.

4. ಆರೋಪಿತರ ವಿರುದ್ಧ ದೋಷಾರೋಪಣೆಯನ್ನು ತಯಾರಿಸಿ, ಓದಿ, ತಿಳಿಸಿ, ಕೇಳಿ ಆರೋಪಿತರು ಆರೋಪವನ್ನು ನಿರಾಕರಿಸಿದ್ದು ತಪ್ಪನ್ನು ಒಪ್ಪಿಕೊಂಡಿರುವುದಿಲ್ಲ ಮತ್ತು ಪ್ರಕರಣದ ವಿಚಾರಣೆ ಆಗಲಿ ಎಂದು ಕೋರಿರುತ್ತಾರೆ. ಆರೋಪಿತರ ವಿರುದ್ಧ ಅಪರಾಧಗಳನ್ನು ರುಜುವಾತುಪಡಿಸಲು ಒಟ್ಟು 10 ಜನ ಸಾಕ್ಷಿದಾರರಲ್ಲಿ ಚಾಸಾ-1 ಮತ್ತು ಚಾಸಾ-2 ರವರನ್ನು ಪ್ರಾಸಾ-1 ಮತ್ತು ಪ್ರಾಸಾ-2 ಎಂದು ವಿಚಾರಣೆಗೆ ಒಳಪಡಿಸಿ ನಿಪಿ-1 ರಿಂದ ನಿಪಿ-4 ನ್ನು ಗುರುತಿಸಿಕೊಂಡಿರುತ್ತಾರೆ.

5. ಮಾನ್ಯ ಸರ್ಕಾರಿ ಅಭಿಯೋಜಕರು ಮತ್ತು ಆರೋಪಿತರ ಪರ ವಕೀಲರಿಂದ ವಾದ ಪ್ರತಿವಾದವನ್ನು ಕೇಳಲಾಯಿತು.

6. ಈ ಪ್ರಕರಣದಲ್ಲಿನ ಇತ್ಯರ್ಥಕ್ಕೆ ಈ ಕೆಳಕಂಡ ಅಂಶಗಳು ಈ ನ್ಯಾಯಾಲಯದ ಅವಗಾಹನೆಗೆ ಬಂದಿರುತ್ತವೆ.

ಅಂಶಗಳು

1. ದಿಃ10.09.2021 ರಂದು ಸಮಯ ರಾತ್ರಿ 7.30 ಗಂಟೆಗೆ ಸುಂಟಿಕೊಪ್ಪ ಪೊಲೀಸ್ ಠಾಣಾ ಸರಹದ್ದಿನ ಕಾನ್ ಬೈಲ್ ಮಂಜಿಕೆರೆ ಗ್ರಾಮದಲ್ಲಿ ಚಾಸಾ-1 ರವರು ಗೌರಿ ಗಣೇಶ ಮೂರ್ತಿಯನ್ನು ವಿಸರ್ಜಿಸಿ ಮಂಜಿಕೆರೆ ಸಮುದಾಯ ಭವನದ ಬಳಿ ನಿಂತಿದ್ದಾಗ ಆರೋಪಿತರು ಚಾಸಾ-1 ರವರೊಡನೆ ವಿನಾ ಕಾರಣ ಜಗಳ ತೆಗೆದು 2 ಮತ್ತು 3 ನೇ ಆರೋಪಿತರು ಕೈಯಿಂದ ಚಾಸಾ-1 ರವರ ತುಟಿ, ಕುತ್ತಿಗೆ ಮತ್ತು ಮೂಗಿನ ಭಾಗಕ್ಕೆ ಹೊಡೆದು ಹಲ್ಲೆ ಮಾಡಿ ಸಾಮಾನ್ಯ ಮತ್ತು ತೀವ್ರ ಸ್ವರೂಪದ ಗಾಯವನ್ನುಂಟು ಮಾಡಿದ್ದು ಆ ಮೂಲಕ ಆರೋಪಿತರು ಭಾ.ದಂ.ಸಂ. ಕಲಂ 323 ಮತ್ತು 325 ಸಹವಾಚಕ ಕಲಂ 34 ಕಾಯ್ದೆಯಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿದ್ದಾರೆಯೇ ಎಂಬುದನ್ನು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತು ಪಡಿಸಿರುತ್ತದೆಯೇ?

2. ಮೇಲೆ ಹೇಳಿದ ದಿನ, ಸಮಯ ಮತ್ತು ಅದೇ ಸ್ಥಳದಲ್ಲಿ ಆರೋಪಿತರು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಮೇಲ್ಕಂಡ ಕೃತ್ಯವನ್ನು ಮುಂದುವರೆಸುತ್ತಾ 3 ನೇ ಆರೋಪಿತ ಚಾಸಾ-1 ರವರಿಗೆ ಅಲ್ಲಿಯೇ ಬಿದ್ದಿದ್ದ ಒಂದು ಮರದ ದೊಣ್ಣೆಯಿಂದ ಚಾಸಾ-1 ರವರ ಬೆನ್ನು ಮತ್ತು ತೊಡೆಯ ಭಾಗಕ್ಕೆ ಹೊಡೆದು ಹಲ್ಲೆ ಮಾಡಿದ್ದು ಆ ಮೂಲಕ ಆರೋಪಿತರು ಭಾ.ದಂ.ಸಂ. ಕಲಂ 324 ಸಹವಾಚಕ ಕಲಂ 34 ಕಾಯ್ದೆಯಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿದ್ದಾರೆಯೇ ಎಂಬುದನ್ನು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತು ಪಡಿಸಿರುತ್ತದೆಯೇ?

3. ಯಾವ ಆದೇಶ?

7. ಈ ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರ ಈ ಕೆಳಗಿನಂತೆ ಇರುತ್ತದೆ.

ಅಂಶ-1 ಮತ್ತು 2 : ನಕರಾತ್ಮಕವಾಗಿ
ಅಂಶ-3 : ಅಂತಿಮ ಆದೇಶದಂತೆ, ಈ ಕೆಳಕಂಡ ಕಾರಣಗಳಿಗಾಗಿ:

ಕಾರಣಗಳು

8. **ಅಂಶ ಸಂಖ್ಯೆ-1 ಮತ್ತು 2:-** ಸಂಗತಿಗಳ ಪುನಾರಾವರ್ತನೆಯನ್ನು ತಪ್ಪಿಸಲು ಅಂಶ-1 ಮತ್ತು 2 ನ್ನು ಒಟ್ಟಾಗಿ ಪರಿಗಣನೆಗೆ ತೆಗೆದುಕೊಳ್ಳಲಾಗಿದೆ. ಚಾಸಾ-1 ರವರನ್ನು ಪ್ರಾಸಾ-1 ಎಂದು ವಿಚಾರಣೆಗೆ ಒಳಪಡಿಸಲಾಗಿ ಇವರು ತನ್ನ ಮುಖ್ಯ ವಿಚಾರಣೆಯಲ್ಲಿ ಆರೋಪಿತರು ಮತ್ತು ತನ್ನ ನಡುವೆ ಯಾವುದೇ ಗಲಾಟೆ ನಡೆದಿಲ್ಲ, ಆರೋಪಿತರು ದೊಣ್ಣೆಯಿಂದ ಮತ್ತು ಕೈಯಿಂದ ತನಗೆ ಯಾವುದೇ ಹಲ್ಲೆ ಮಾಡಿಲ್ಲ, ಚಾಸಾ–2 ರವರು ಯಾವುದೇ ಗಲಾಟೆಯನ್ನು ಬಿಡಿಸಿಲ್ಲ, ಈ ಸಂಬಂಧ ತಾನು ನಿಪಿ-1 ರಂತೆ ಯಾವುದೇ ದೂರು ಸಲ್ಲಿಸಿಲ್ಲ, ತನ್ನ ಸಮಕ್ಷಮ ನಿಪಿ-2 ರಂತೆ ಯಾವುದೇ ಪಂಚನಾಮೆ ನಡೆಸಿಲ್ಲ, ಯಾವುದೇ ಸ್ಥಳ ಪರಿಶೀಲನೆ ನಡೆಸಿಲ್ಲ, ನಿಪಿ-1 ಮತ್ತು 2 ರಲ್ಲಿ ಏನು ಬರೆದಿದೆ ಎಂಬುದು ತನಗೆ ಗೊತ್ತಿಲ್ಲ, ನಿಪಿ-1 ಮತ್ತು 2 ಕ್ಕೆ ತಾನು ಎಲ್ಲಿ, ಯಾವಾಗ ಮತ್ತು ಯಾವ ವಿಚಾರಕ್ಕೆ ಸಹಿ ಮಾಡಿರುತ್ತೇನೆ ಎಂಬುದು ತನಗೆ ಗೊತ್ತಿಲ್ಲ, ನಿಪಿ-1 ಮತ್ತು 2 ನ್ನು ಎಲ್ಲಿ ಯಾವಾಗ, ಬರೆಯಲಾಯಿತು ಎಂಬುದು ತನಗೆ ಗೊತ್ತಿಲ್ಲ, ಅದರ ಉಲ್ಲೇಖಗಳನ್ನು ಪೋಲಿಸರು ತನಗೆ ಓದಿ ಹೇಳಿಲ್ಲ,

ತಾನು ಕೆಲಸದ ನಿಮ್ಮಿತ್ತ ಪೊಲೀಸ್ ಠಾಣೆಗೆ ಭೇಟಿ ನೀಡಿದ್ದಾಗ ಪೊಲೀಸರು ಕೆಲವು ದಾಖಲೆಗಳಿಗೆ ತನ್ನ ಸಹಿ ಪಡೆದು ಕೊಂಡಿರುತ್ತಾರೆಂದು, ತನಿಖಾಧಿಕಾರಿಗಳಿಗೆ ತಾನು ನಿಪಿ–3 ರಂತೆ ಯಾವುದೇ ಮರು ಹೇಳಿಕೆ ನೀಡಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಿದರೂ ಸಹಾ ಪ್ರಾ.ಸಾ-1 ರವರು ಅಭಿಯೋಜನೆಗೆ ಪೂರಕವಾದಂತಹ ಯಾವುದೇ ಸಾಕ್ಷ್ಯ ನುಡಿದಿರುವುದಿಲ್ಲ. ಸದರಿ ಸಾಕ್ಷಿದಾರರು ಅಭಿಯೋಜನೆಯ ಪರವಾಗಿ ಯಾವುದೇ ಸಾಕ್ಷ್ಯವನ್ನು ನೀಡಿಲ್ಲದ ಕಾರಣ ಆರೋಪಿತರ ವಿರುದ್ಧ ಹೊರಿಸಿದ ಆರೋಪಗಳನ್ನು ಸಾಬೀತು ಮಾಡಲು ಅಭಿಯೋಜನಾ ಪಕ್ಷದವರು ಸಂಪೂರ್ಣವಾಗಿ ವಿಫಲರಾಗಿರುತ್ತಾರೆ.

9. ಚಾಸಾ-2 ರವರನ್ನು ಪ್ರಾಸಾ-2 ಎಂದು ವಿಚಾರಣೆಗೆ ಒಳಪಡಿಸಲಾಗಿ ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಈ ಪ್ರಕರಣದ ಯಾವ ವಿಚಾರಗಳು ತನಗೆ ಗೊತ್ತಿಲ್ಲ, ಆರೋಪಿತರು ಮತ್ತು ಚಾಸಾ-1 ರ ನಡುವೆ ಯಾವುದೇ ಗಲಾಟೆ ನಡೆದಿಲ್ಲ, ಆರೋಪಿತರು ದೊಣ್ಣೆಯಿಂದ ಮತ್ತು ಕೈಯಿಂದ ಚಾಸಾ-1 ರವರಿಗೆ ಯಾವುದೇ ಹಲ್ಲೆ ಮಾಡಿಲ್ಲ, ತಾನು ಯಾವುದೇ ಗಲಾಟೆ ಬಿಡಿಸಿಲ್ಲ, ತಾನು ಯಾವುದೇ ಗಲಾಟೆಯನ್ನು ಖುದ್ದು ನೋಡಿಲ್ಲ, ಈ ಸಂಬಂಧ ತನಿಖಾಧಿಕಾರಿಗಳಿಗೆ ತಾನು ನಿಪಿ-4 ರಂತೆ ಯಾವುದೇ ಹೇಳಿಕೆ ನೀಡಿಲ್ಲ ಎಂದು ಸಾಕ್ಷ್ಯ

ನುಡಿದಿರುತ್ತಾರೆ. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಿದರೂ ಸಹಾ ಪ್ರಾ.ಸಾ-2 ರವರು ಅಭಿಯೋಜನೆಗೆ ಪೂರಕವಾದಂತಹ ಯಾವುದೇ ಸಾಕ್ಷ್ಯ ನುಡಿದಿರುವುದಿಲ್ಲ. ಸದರಿ ಸಾಕ್ಷಿದಾರರು ಅಭಿಯೋಜನೆಯ ಪರವಾಗಿ ಯಾವುದೇ ಸಾಕ್ಷ್ಯವನ್ನು ನೀಡಿಲ್ಲದ ಕಾರಣ ಆರೋಪಿತರ ವಿರುದ್ಧ ಹೊರಿಸಿದ ಆರೋಪಗಳನ್ನು ಸಾಬೀತು ಮಾಡಲು ಅಭಿಯೋಜನಾ ಪಕ್ಷದವರು ಸಂಪೂರ್ಣವಾಗಿ ವಿಫಲರಾಗಿರುತ್ತಾರೆ.

10. ಈ ಪ್ರಕರಣದಲ್ಲಿ ಪ್ರಾಸಾ-1 ರವರು ದೂರುದಾರರು ಮತ್ತು ನೊಂದ ಸಾಕ್ಷಿದಾರರಾಗಿದ್ದು, ಪ್ರಾಸಾ-2 ರವರು ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು ಇವರುಗಳು ಅಭಿಯೋಜನೆಯ ಮೊಕದ್ದಮೆಗೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಆದ್ದರಿಂದ ಅಭಿಯೋಜನೆಯು ದೂರಿನಲ್ಲಿ ನಮೂದಿಸಿರುವ ಅಂಶಗಳನ್ನು ಸಾಬೀತು ಪಡಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿರುತ್ತಾರೆ. ಅಭಿಯೋಜನೆಯ ಸಾಕ್ಷ್ಯದಲ್ಲಿ ಆರೋಪಿತರ ಮೇಲೆ ಆರೋಪಿಸಿದ ಅಪರಾಧ ಮಾಡಿದ್ದಾರೆಂದು ತೋರ್ಪಡಿಸುವ ಯಾವುದೇ ಸಾಕ್ಷ್ಯ ಇಲ್ಲ. ಈ ಮೇಲ್ಕಂಡ ಕಾರಣಗಳಿಗಾಗಿ ಅಭಿಯೋಜನೆಯು ಆರೋಪಿತರ ವಿರುದ್ಧ ಆರೋಪಿಸಿದ ಆರೋಪಗಳನ್ನು ಸಾಬೀತು ಪಡಿಸುವಲ್ಲಿ ವಿಫಲವಾಗಿದೆ. ಆದ್ದರಿಂದ ಅಂಶ 1 ಮತ್ತು 2 ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

11. **<u>ಅಂಶ-3-</u>** ಅಂಶ-1 ಮತ್ತು 2 ನ್ನು ನಕರಾತ್ಮಕವಾಗಿ ಉತ್ತರಿಸಿರುವುದರಿಂದ 1 ರಿಂದ 3 ನೇ ಆರೋಪಿತರು ಬಿಡುಗಡೆಗೆ ಯೋಗ್ಯರು ಎಂದು ತಿಳಿದು ಅಂಶ-3 ಕ್ಕೆ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

<u>ಆದೇಶ</u>

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1) ರಡಿಯಲ್ಲಿ 1 ರಿಂದ 3 ನೇ ಆರೋಪಿತರ ವಿರುದ್ಧ ಮಾಡಲಾದ ಭಾ.ದಂ.ಸಂ. ಕಲಂ.323, 325 ಮತ್ತು 324 ಸಹವಾಚಕ ಕಲಂ 34 ರಡಿಯಲ್ಲಿನ ಶಿಕ್ಷಾರ್ಹವಾದ ಆಪಾದನೆಯಿಂದ ಆರೋಪಿತರನ್ನು ದೋಷಮುಕ್ತಗೊಳಿಸಿ ಬಿಡುಗಡೆಗೊಳಿಸಲಾಗಿದೆ.

ಆರೋಪಿತರು ಮತ್ತು ಅವರ ಜಾಮೀನುದಾರರು ನ್ಯಾಯಾಲಯಕ್ಕೆ ಬರೆದುಕೊಟ್ಟಿರುವ ಜಾಮೀನು ಮುಚ್ಚಳಿಕೆಯನ್ನು ರದ್ದುಗೊಳಿಸಲಾಗಿದೆ.

ಈ ಪ್ರಕರಣದ ಸ್ವತ್ತು ಪಟ್ಟಿ ಸಂಃ 84/2021 ರಲ್ಲಿ ವಶಪಡಿಸಿಕೊಳ್ಳಲಾದ ದೊಣ್ಣೆಯನ್ನು ಪ್ರಕರಣದ ಅಪೀಲು ಅವದಿ ಮುಗಿದ ನಂತರ ನಾಶಗೊಳಿಸಲು ಆದೇಶಿಸಲಾಗಿದೆ.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರಕ್ಕೆ ನೀಡಿ ನಂತರ ನನ್ನಿಂದ ತಿದ್ದುಪಡಿ ಮಾಡಿ ಈ ದಿವಸ ಅಂದರೆ ದಿನಾಂಕ **2 ನೇ ಆಗಸ್ಟ್** ಮಾಹೆಯಾನ **2024** ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ)

ಸಹಿ/-
(ನಾಗೇಶ್ ಎನ್.ಎ.)
ಅಪರ ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಗಳು, ಮಡಿಕೇರಿ.

ಅನುಬಂಧಗಳು

ಅಭಿಯೋಜನೆ ಪರ ಗುರುತಿಸಲ್ಪಟ್ಟ ಸಾಕ್ಷಿಗಳು:

ಪ್ರಾಸಾ.1 ಸಚಿನ್ ಎಂ.ಸಿ.
ಪ್ರಾಸಾ-2 ಸುಂದರ್ ಪಿ.ಹೆಚ್.

ಅಭಿಯೋಜನೆ ಪರ ಗುರುತಿಸಲಾದ ನಿಶಾನೆಗಳು:

ನಿಪಿ-1 ದೂರು
ನಿಪಿ-2 ಪಂಚನಾಮೆ
ನಿಪಿ-1 ಎ, 2 ಎ ಪ್ರಾಸಾ-1 ರವರ ಸಹಿಗಳು
ನಿಪಿ-3, 4 ಪ್ರಾಸಾ-1 ಮತ್ತು 2 ರವರ ಹೇಳಿಕೆ

ಅಭಿಯೋಜನೆ ಪರ ಗುರುತಿಸಲಾದ ಮುದ್ದೆಮಾಲುಗಳು:

- ಇಲ್ಲ -

ಆರೋಪಿ/ಆರೋಪಿತರ ಪರ ವಿಚಾರಗೊಳಪಟ್ಟ ಸಾಕ್ಷಿಗಳು:

- ಇಲ್ಲ -

ಆರೋಪಿ/ಆರೋಪಿತರ ಪರ ಗುರುತಿಸಲಾದ ನಿಶಾನೆಗಳು:

- ಇಲ್ಲ -

ಸಹಿ/-
ಅಪರ ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಗಳು, ಮಡಿಕೇರಿ.